ಅನ್ನು ಮೊದಲು ತೋರಿಸುವುದೇ ಆ ಕಾಲರ್. ಸರಿಯಾದ ಕಾಲರ್ ಇರುವ ಉಡುಪು ಹಾಕಿಕೊಂಡು ಬಂದರೆ ಆ ವ್ಯಕ್ತಿ ಸಭೆಯಲ್ಲಿ ಎದ್ದು ಕಾಣುವುದಂತೂ ಸತ್ಯ.

### ಮ್ಯಾಂಡರಿಯನ್ ಕಾಲರ್

ಈ ಯುನಿಸೆಕ್ಸ್ ಕಾಲರ್ ಶೈಲಿಯಲ್ಲಿ ಬ್ಯಾಂಡ್ ಕಾಲರ್ ಹಾಗೂ ನೆಹರೂ ಕಾಲರ್ ಎಂಬ ಒಂದೆರಡು ವ್ಯತ್ಯಾಸಗಳಿವೆ. ಇದು ಚೀನಾದಲ್ಲಿ ಹೆಚ್ಚು ಪ್ರಸಿದ್ಧಿಯಾಗಿದೆ. 17ನೇ ಶತಮಾನದಲ್ಲಿ ಚೀನಿ ಅಧಿಕಾರಶಾಹಿಗಳು ಈ ಬಗೆಯ ಕಾಲರ್ ಇರುವ ಉಡುಪುಗಳನ್ನು ಧರಿಸುತ್ತಿದ್ದರಂತೆ. ಈಗ ಇದು ಫ್ಯಾಷನ್ ಆಗಿದೆ. ಬ್ಯಾಂಡ್ ಕಾಲರ್ ಇರುವ ಬಟ್ಟೆಗಳು ಹಬ್ಬಕ್ಕೆ ಹಾಗೂ ಇತರೆ ಕಾರ್ಯಕ್ರಮಗಳಿಗೆ ಹೇಳಿ ಮಾಡಿಸಿದ್ದಾಗಿದೆ. ಇದು ಧರಿಸಿದವರಿಗೆ ಸ್ಟೈಲಿಷ್ ಲುಕ್ ಕೂಡ ನೀಡುತ್ತದೆ.



### ಸ್ಪ್ರೆಡ್ ಕಾಲರ್

ಬ್ಯುಸಿನೆಸ್ ಔಟ್‌ಫಿಟ್, ಸ್ಮಾರ್ಟ್ ಕ್ಯಾಷುವಲ್ ಜೊತೆ ಟೈ ಹಾಕಿ, ಅಥವಾ ಟೈ ಇಲ್ಲದೆ ಕೂಡ ಇದನ್ನು ಬಳಸಬಹುದು. ಬ್ಲೇಜರ್ ಜೊತೆ ಈ ತರಹದ ಕಾಲರ್ ಇರುವ ಶರ್ಟ್ ಒಳ್ಳೆಯ ಲುಕ್ ನೀಡುತ್ತದೆ. ದುಂಡಗಿನ ಮುಖದವರಿಗಿಂತ ತುಸು ಉದ್ದ ಮುಖ ಇರುವವರಿಗೆ ಈ ಕಾಲರ್ ಚೆನ್ನಾಗಿ ಒಪ್ಪುತ್ತದೆ. ಹಾಗೇ ಡೆನಿಮ್, ಬಿಳಿ ಕ್ಯಾನ್ವಾಸ್ ಸ್ನೀಕರ್ಸ್ ಜತೆ ಇದು ಹೆಚ್ಚಾಗಿ ಹೊಂದಿಕೆಯಾಗುತ್ತದೆ.

### ಕ್ಯೂಬನ್ ಕಾಲರ್

ಬೇಸಿಗೆಯಲ್ಲಿ ಆದಷ್ಟು ಆರಾಮದಾಯಕವಾದ ಬಟ್ಟೆ ಧರಿಸಲು ಇಷ್ಟಪಡುವವರು ಈ ಕ್ಯೂಬನ್ ಕಾಲರ್ ಇರುವ ಶರ್ಟ್ ಪ್ರಯತ್ನಿಸಿ ನೋಡಬಹುದು. ಯಾಕೆಂದರೆ ಈ ಕಾಲರ್ ವಿನ್ಯಾಸವಿರುವ ಶರ್ಟ್‌ಗಳು ಬೇಸಿಗೆಗೆ ಹೇಳಿ ಮಾಡಿಸಿದ್ದು. ಈ ಕ್ಯೂಬನ್ ಕಾಲರ್ ವಿನ್ಯಾಸ ಇರುವ ಬಟ್ಟೆಗಳು ಪ್ಯಾಂಟ್ ಹಾಗೂ ಪೈಜಾಮಾಗಳಿಗೆ ಹೆಚ್ಚು ಹೊಂದಿಕೆಯಾಗುತ್ತದೆ. ಇದನ್ನು ಯಾವುದೇ ಕಾರ್ಯಕ್ರಮಗಳಿಗೂ ಧರಿಸಿಕೊಂಡು ಹೋಗಬಹುದು. ಬೀಚ್‌ಗೆ ಹೋಗುವಾಗ ಟೀ ಶರ್ಟ್ ಬದಲು ಕ್ಯೂಬನ್ ಕಾಲರ್ ಇರುವ ಶರ್ಟ್ ಹೆಚ್ಚು ಆರಾಮದಾಯಕವೆನಿಸುತ್ತದೆ.

### ಪೀಟರ್ ಪ್ಯಾನ್ ಕ್ಲಬ್ ಕಾಲರ್

ಹೆಚ್ಚಾಗಿ ಶಾಲೆಯ ಸಮವಸ್ತ್ರಗಳಿಗೆ ಈ ವಿನ್ಯಾಸದ ಕಾಲರ್ ಮಾಡುತ್ತಾರೆ. ವೃತ್ತಾಕಾರದ ಪೀಟರ್ ಪ್ಯಾನ್ ಕ್ಲಬ್ ಕಾಲರ್ ಕ್ಯಾಷುವಲ್ ಲುಕ್ ನೀಡುತ್ತದೆ. ಹಾಗೇ ಈ ತರಹದ ಕಾಲರ್ ಉಡುಪು ಆರಾಮದಾಯಕವೆನಿಸುತ್ತದೆ.

### ವಿ ನೆಕ್

ಬಟ್ಟೆ ಆರಿಸುವಾಗ ಯಾವ ಬಣ್ಣ ನಮಗೆ ಸೂಕ್ತವಾಗುತ್ತದೆ ಎಂದು ಹುಡುಕುತ್ತೇವೆ. ಹಾಗೇ ಯಾವ ತರಹದ ಕಾಲರ್ ನಮ್ಮ ಮುಖಕ್ಕೆ ಹೊಂದಿಕೆಯಾಗುತ್ತದೆ ಎಂಬುದು ಗಮನದಲ್ಲಿಟ್ಟುಕೊಳ್ಳುವುದು ಕೂಡ ಮುಖ್ಯ. ಎಲ್ಲರ ಮುಖ ಒಂದೇ ರೀತಿಯಾಗಿರುವುದಿಲ್ಲ. ಒಬ್ಬರದು ದಪ್ಪಗಿದ್ದರೆ ಇನ್ನೊಬ್ಬರದು ಚಪ್ಪಟೆ ಇರುತ್ತದೆ. ಕೆಲವರದ್ದು ಉದ್ದಕ್ಕಿದ್ದರೆ ಇನ್ನು ಕೆಲವರದ್ದು ಅಗಲವಾಗಿರುತ್ತದೆ. ಹಾಗಾಗಿ ಕೆಲವೊಂದು ಕಾಲರ್ ವಿನ್ಯಾಸವನ್ನು ಕೂಡ ನಮ್ಮ ಮುಖದ ಆಕಾರವನ್ನು ನೋಡಿಕೊಂಡು ಆರಿಸಿಕೊಳ್ಳಬೇಕಾಗುತ್ತದೆ. ಈ ವಿ ನೆಕ್ ಶರ್ಟ್‌ಗಳು ದುಂಡಗಿನ ಮುಖದವರಿಗೆ ಹೆಚ್ಚು ಹೊಂದಿಕೆಯಾಗುತ್ತದೆ.

ಹಾಗೆಂದು ತುಂಬಾ ಡೀಪ್ ಆಗಿ ವಿ ನೆಕ್ ಇರುವ ಉಡುಪು ತೆಗೆದುಕೊಳ್ಳಬೇಡಿ. ವಿ ಪಾಯಿಂಟ್ ಕಾಲರ್ ಬೋನ್ ಲೈನ್‌ಗಿಂತ 3 ಇಂಚಿನಿಂದ ಹೆಚ್ಚಿರಬಾರದು. ಈ ಎಲ್ಲ ಅಂಶಗಳನ್ನು ಸರಿಯಾಗಿ ಗಮನದಲ್ಲಿಟ್ಟುಕೊಂಡು ವಿ ನೆಕ್ ಶರ್ಟ್ ತೆಗೆದುಕೊಂಡರೆ ಪಾರ್ಟಿಯಲ್ಲಿ ನೀವು ಎದ್ದು ಕಾಣುತ್ತೀರಿ. ಇನ್ನು ವಿ ನೆಕ್ ಉಡುಪು ನಿಮ್ಮ ದೇಹವನ್ನು ಚೆನ್ನಾಗಿ ಅಪ್ಪಿ ಹಿಡಿದ ಹಾಗೇ ಇರುತ್ತದೆ. ಹಾಗಾಗಿ ಇದು ಫಿಟ್ ಲುಕ್ ನಿಮಗೆ ನೀಡುವುದು. ಹಾಗೇ ಇದು ನಿಮ್ಮ ಕುತ್ತಿಗೆಗೆ ಅಗಲವಾದ ಲುಕ್ ನೀಡುತ್ತದೆ.

### ಟರ್ಟಲ್ ನೆಕ್

ಹೆಚ್ಚಾಗಿ ಚಳಿಗಾಲದಲ್ಲಿ ಮೈ ಮುಚ್ಚುವ, ದಪ್ಪಗಿನ ಬಟ್ಟೆ ಹಾಕುವುದರಿಂದ ಸ್ಟೈಲ್ ಬಗ್ಗೆ ಹೆಚ್ಚು ಗಮನ ಕೊಡುವುದಕ್ಕೆ ಆಗುವುದಿಲ್ಲ. ಟರ್ಟಲ್ ನೆಕ್ ವಿನ್ಯಾಸವಿರುವ ಟೀ ಶರ್ಟ್ ಹಾಗೂ ಶರ್ಟ್‌ಗಳು ಚಳಿಗಾಲಕ್ಕೆ ಹೇಳಿ ಮಾಡಿಸಿದ್ದು. ಕುತ್ತಿಗೆಯ ಭಾಗವನ್ನು ಇದು ಮುಚ್ಚುವುದರಿಂದ ಚಳಿಯಿಂದ ಪಾರಾಗುವುದರ ಜೊತೆಗೆ ನಿಮಗೆ ಸ್ಟೈಲಿಷ್ ಲುಕ್ ನೀಡುತ್ತದೆ. ಮೊದಲೆಲ್ಲಾ ಪೋಲೊ ಆಟಗಾರರು, ನೌಕಾ ಪಡೆಯವರು, ಮೀನುಗಾರರು ಮಾತ್ರ ಈ ವಿನ್ಯಾಸವಿರುವ ಕಾಲರ್ ಧರಿಸುತ್ತಿದ್ದರು. ಆದರೆ ಈಗ ಇದೂ ಫ್ಯಾಷನ್ ಆಗಿದೆ. ಹುಡುಗಿಯರು ಕೂಡ ಈ ವಿನ್ಯಾಸ ಇರುವ ಶರ್ಟ್‌ಗಳನ್ನು ಧರಿಸುತ್ತಾರೆ. ಕಾರ್ಗೋ ಶಾರ್ಟ್ ಜೊತೆ ಈ ಬಗೆಯ ವಿನ್ಯಾಸ ಇರುವ ಉಡುಪು ಹೆಚ್ಚು ಹೊಂದಿಕೆಯಾಗುತ್ತದೆ. ಹಾಗೇ ಟರ್ಟಲ್ ನೆಕ್ ಟೀ ಶರ್ಟ್ ಮೇಲೆ ಬ್ಲೇಜರ್ ಕೂಡ ಚೆನ್ನಾಗಿ ಹೊಂದಿಕೆಯಾಗುತ್ತದೆ.